ಛೇಡಿಸಿದಳು.

'ಹಾಂ.... ಈ ಸರ ನಿಂಗ ಛಂದ ಕಾಣಿಸ್ತೈತಿ .... ನೀನೀಗ ಅವ್ವ ನಡುಪಾಪು'

'ನೋಡವ್ವಾ.... ಆಟ್ನೊತ್ತಿನಿಂದ ಪ್ರಸಾದಪ್ಪ ನಿನಗಾಗಿ ಕಾಯ್ತಾ ಅದಾರೆ' ಪಾಪು ಆತನನ್ನು ಸ್ವಲ್ಪ ಬಿಗುಮಾನದಿಂದಲೇ ನೋಡಿದಳು.

'ಹೋಗ್ವ.... ಅವ್ರನ್ನ ಮುಟ್ಟು ... ನಾವು ಮುಂದಕ್ಕೆ ಜೊತ್ಯಾಗೇ ಇರ್ತೀವಿ... ನಮ್ಮನ್ನು ಕಂಡ್ರೆ ಭಾಳ ಕಾಳಜಿ ಅವ್ರಿಗೆ' ಎಂದು ನಸುನಕ್ಕಳು ಗಂಗೆ.

'ಇವ್ರು ಯಾಕ ಯಾವಾಗ್ಲೂ ಎದೀ ಮ್ಯಾಗೇ ಕೈ ಇಕ್ಕೊತಾರವ್ವ?... ಎದಿ ನೋವು ಇದೆಯಾ?

'ಇಲ್ಲ ಪೋರೀ... ಈಗ ಯಾವ ಬೇನೀನೂ ಅವ್ರನ್ನ ಕಾಡೂದಿಲ್ಲ... ಹೋಗಿ ಅವ್ರ ಆಶೀರ್ವಾದ ತಕ್ಕೊವ್ವಾ...'

ಅವಳು ಅಲುಗಾಡಲಿಲ್ಲ... ಪ್ರಸಾದನನ್ನು ಕಂಡರೇನೊ ಅವಳಿಗೆ ಇಷ್ಟ. ಆದರೆ ಅಮ್ಮನ ಬಳಿ ಅವನು ಸ್ಥಾನ ತಗೊಂಡಿರೋದು ಅವಳಿಗೆ ಇಷ್ಟವಿರಲಿಲ್ಲ. ತಾಯಿ ತನ್ನನ್ನು ಬಲವಂತವಾಗಿ ಆಶೀರ್ವಾದ ತೆಗೆದುಕೊಂಡು ಬರಲು ಹೇಳಿದ್ದು ಅವಳಿಗೆ ಇಷ್ಟವಾಗಲಿಲ್ಲ. ಅವಳು ಸುಮ್ಮನೇ ಇದ್ದದು ಪ್ರಸಾದನಿಗೆ ಕಾತುರ ತಂದಿತು. ಮಗುವನ್ನು ಮಮತೆಯಿಂದ ಮುದ್ದು ಮಾಡಲು ತವಕಿಸುತ್ತಿದ್ದ ಆತ. ಅವಳನ್ನು ಕೈ ಚಾಚಿ ಕರೆದುಕೊಳ್ಳಲು ಹವಣಿಸಿದ. ಅದು ಹೇಗೊ ಅರಿತುಬಿಟ್ಟ ಪಾಪು ಅಲ್ಲಿಂದ ಕೊಳದ ಕಡೆಗೆ ಓಡಿಬಿಟ್ಟಳು...

ಪ್ರಸಾದನಿಗೆ ನಗು ಬಂದಿತು. ಅವನು ನಕ್ಕದ್ದು ನೋಡಿ ಗಂಗೆ ಮನಸ್ಸು ಹಗುರವಾಯಿತು.

'ಗಂಗಾ... ನಮ್ಮ ತಂದೆ ನಾನೆಲ್ಲಿ ಹೋದೆನೆಂದು ಆತಂಕಪಡುತ್ತಿರಬಹುದು... ನಾನು ಹೋಗ್ತೀನಿ... ಮತ್ತೆ ನೋಡೋಣ...'

ಅವನು ಹೊರಟದ್ದನ್ನು ಕಂಡ ಮೇಲೆ ಪಾಪು ತಾಯ ಬಳಿ ಓಡಿ ಬಂದು ಅವಳ ಕೈಹಿಡಿದುಕೊಂಡಳು. ಒಂದಷ್ಟು ದೂರ ಹೋದ ಮೇಲೆ ಪ್ರಸಾದ ಹಿಂದಿರುಗಿ ಒಮ್ಮೆ ನೋಡಿದ. ತಾಯಿ ಮಗಳು ಒಟ್ಟಿಗೆ ನಿಂತದ್ದು ಕಂಡು ಅವನ ಮನಸ್ಸು ನಾನಾ ರೀತಿ ಮೃದುಭಾವಗಳನ್ನು ಚಿಮ್ಮಿಸಿತು. ತಾನು ಗಂಗೆಯೊಂದಿಗೆ ಕುಳಿತಿದ್ದ ದಿಬ್ಬ ನೋಡಿದ. ಅಲ್ಲಿ ನಿಶ್ಚಿತ ಮಾಡಿಕೊಂಡದ್ದು ನಿಜವಾಗಿ ನಡೆಯುತ್ತದೆಯೆ...? ಅವನಿಗೆ ಜೀವನ ಸಾಗಿಸುವುದರ ಬಗ್ಗೆ ಯಾವ ಚಿಂತೆಯೂ ಇರಲಿಲ್ಲ. ಕನ್ನಡ ನಾಡಿನಲ್ಲಿ ಯಾವ ಊರಲ್ಲಾದರೂ ನಾನು ಉಪನ್ಯಾಸ, ಪೂಜೆ, ಧಾರ್ಮಿಕ ಕಾರ್ಯಗಳನ್ನು ನಡೆಸಿ ಬದುಕು ಸಾಗಿಸುವ ಭರವಸೆ ಇತ್ತು. ಆದರೆ ತನ್ನ ಜೊತೆ ಬಾಳ್ವೆ ಮಾಡುವ ಹೆಣ್ಣನ್ನು ಕಂಡ ಮೇಲೆ ಜನ ತನ್ನನ್ನು ಆದರಿಸಿ ಈ ಕಾರ್ಯಗಳನ್ನೆಲ್ಲಾ ಮಾಡಲು ಸಮ್ಮತಿಸುವರೆ...? ಪುರೋಹಿತನಾದ ಮೇಲೆ ಅದು ಸಾಧ್ಯವೇ ಇಲ್ಲ. ಎಲ್ಲ ಮುಚ್ಚಿಟ್ಟುಕೊಂಡು ನಾಟಕದ ಬದುಕು ಮಾಡಬೇಕಾದೀತು.

ಗಂಗೆ ವರ್ಷಗಟ್ಟಲೆ ದೇವಸ್ಥಾನದ ಸಂಪರ್ಕ ಇಟ್ಟುಕೊಂಡಿರುವುದರಿಂದ ಅವಳು ಹೇಗೆ ನಿಭಾಯಿಸಬೇಕು ಎಂದು ಅರಿತು, ಸೂಕ್ಷ್ಮತೆಯಿಂದ ಗುಟ್ಟನ್ನು ಕಾಪಾಡಿಕೊಳ್ಳಬಹುದೇನೊ. ಅವಳು ವೇಷ ಭೂಷಣ, ನಡೆ ನುಡಿಯಲ್ಲಿ ಜಾಗ್ರತೆ ವಹಿಸಬೇಕು. ಎಲ್ಲ ಅವಳ ಮೇಲೆ ಅವಲಂಬಿಸಿದೆ. ಆಧುನಿಕ ಮಹಿಳೆ ಸುನಂದ ಬನ್ನಪ್ಪನವರ ಬಳಿ ಹಾಸು ಹೊಕ್ಕಿರುವ ಅವಳು ಈಗ ಬಹಳಷ್ಟು ಅರಿತುಕೊಂಡಿದ್ದಾಳೆ. ಹೆಚ್ಚು ಮನೆಯಲ್ಲಿ ಇದ್ದರೂ ಕಸೂತಿಯಿಂದ ಒಂದಷ್ಟು ಸಂಪಾದನೆ ಮಾಡಬಲ್ಲಳು.

(ಸಶೇಷ)

**ಖ್ಯಾತ ಕಥೆಗಾರ್ತಿ**

**ಗೀತಾ ಬಿ.ಯು.**

**ಅವರ**

## ಹೊಸ ಧಾರಾವಾಹಿ

ಗಂಡ ವಿಕ್ರಮ, ಮುದ್ದಾದ ಮಕ್ಕಳಾದ ರಾಹುಲ್–ರಾಧಿಕಾರನ್ನು ಹೊಂದಿರುವ ತುಂಬು ಸಂಸಾರ ಆಕೆಯದು. ಹಣಕ್ಕೇನೂ ಕೊರತೆಯಿಲ್ಲ. ಆದರೂ 'ಅವಳು' ಬದುಕಿನಲ್ಲಿ ಕಲ್ಲು ಮುಳ್ಳಿನ ಹಾದಿಯನ್ನೇ ತುಳಿಯ ಬೇಕಾದ್ದು ಏಕೆ?
ಹಾಗಿದ್ದರೆ ಹೆಣ್ಣಿಗೆ ಜೀವನದಲ್ಲಿ ಬೇಕಿರುವುದು ಏನು? ಪ್ರೀತಿಯೇ? ರಕ್ಷಣೆಯೇ? ಸ್ವಾತಂತ್ರ್ಯವೇ? ಯಾವುದೇ ಜವಾಬ್ದಾರಿ ಇರದ ಸ್ವೇಚಾಚಾರವೇ?

'ಅವಳ' ಬದುಕಿನ ಏಳುಬೀಳುಗಳ ಹೃದಯಸ್ಪರ್ಶಿ ಕಥಾನಕ.



# ಇರುವುದೆಲ್ಲವ ಬಿಟ್ಟು...

## ಶೀಘ್ರ ಆರಂಭ